ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 03-04-1994.

# *ಸಂತುಷ್ಟತೆಯ ಆಧಾರ ಸಂಬಂಧ ಸಂಪತ್ತು ಹಾಗೂ ಆರೋಗ್ಯ.*

(सन्तुष्टता का आधार - सम्बन्ध, सम्पत्ति और सेहत (तन्दुरूस्ती))

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸಂತುಷ್ಟ ಸ್ಥಿತಿಯಿಂದ ಪರಿಸ್ಥಿತಿಗಳನ್ನು ಪರಿವರ್ತನೆ ಮಾಡಿಕೊಳ್ಳುವ ವಿಧಿಯನ್ನು ತಿಳಿಸುವ ಬಾಪ್‌ದಾದಾ ತನ್ನ ಸಂತೋಷಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಹೃದಯರಾಮ ತಂದೆಯು ತನ್ನ ಸದಾ ಸಂತುಷ್ಟವಾಗಿರುವ ಸಂತುಷ್ಟ ಆತ್ಮರನ್ನು ಅಥವಾ ಸಂತುಷ್ಟ ಮಣಿಗಳನ್ನು ನೋಡುತ್ತಿದ್ದಾರೆ. ಈ ಆತ್ಮಿಕ ಮಣಿಗಳ ಹೊಳಪು ಇಡೀ ಸಭೆಯನ್ನು ಹೊಳೆಯುವಂತೆ ಮಾಡುತ್ತಿದೆ. ಸಂತೋಷವಾಗಿರುವ ಅತ್ಮರು ಸ್ವಯಂಗೂ ಪ್ರಿಯ, ಸರ್ವರಿಗೂ ಪ್ರಿಯ ಹಾಗೂ ತಂದೆಯವರಿಗೂ ಪ್ರಿಯವೇ ಆಗಿದ್ದಾರೆ. ಹಾಗಾದರೆ ಹೀಗಿದ್ದೀರಲ್ಲವೆ! ಏಕೆಂದರೆ ಈ ಶ್ರೇಷ್ಠವಾದ ಬ್ರಾಹ್ಮಣ ಜೀವನದಲ್ಲಿ ಅಪ್ರಾಪ್ತಿಯ ಹೆಸರೇ ಇಲ್ಲ. ಸರ್ವಪ್ರಾಪ್ತಿ ಸಂಪನ್ನ ಆತ್ಮರಾಗಿದ್ದೀರಿ. ಆದ್ದರಿಂದ ಎಲ್ಲಿ ಸರ್ವ ಪ್ರಾಪ್ತಿಗಳಿದೆಯೋ ಅಲ್ಲಿ ಸದಾ ಸ್ವತಹವಾಗಿ ಸ್ವಾಭಾವಿಕವಾಗಿ ಸಂತುಷ್ಟತೆಯಿದೆ. ಅವರ ಸ್ವಾಭಾವಿಕ ಸ್ವಭಾವವೇ ಸಂತೋಷದಿಂದ ಇರುವುದಾಗಿದೆ. ಮತ್ತು ಸಂತುಷ್ಟತೆಯ ಸ್ವರೂಪ

ಅಥವಾ ಸ್ವಭಾವ, ನಿಜ ಸಂಸ್ಕಾರವೇ ಇಷ್ಟು ಶ್ರೇಷ್ಠವಾಗಿದೆ. ಸಂತುಷ್ಟತೆಯ ಪ್ರಕಂಪನ, ಅಸಂತುಷ್ಟ ಆತ್ಮರನ್ನೂ, ವಾಯುಮಂಡಲವನ್ನೂ ಸಂತೋಷದ ವಾಯುಮಂಡಲದಲ್ಲಿ ಬದಲಾಯಿಸಿಬಿಡುತ್ತದೆ. ಈ ಸಂಗಮಯುಗದಲ್ಲಿ ಬಾಪ್‌ದಾದಾರವರ ವಿಶೇಷ ಕೊಡುಗೆ ಸಂತುಷ್ಟತೆಯಾಗಿದೆ. ಈ ಒಂದು ಸಂತುಷ್ಟತೆಯ ವಿಶೇಷತೆಯು ಮತ್ತೆಲ್ಲಾ ವಿಶೇಷತೆಗಳನ್ನೂ ಸಹಜವಾಗಿ ತನ್ನ ಸಮೀಪದಲ್ಲಿ ಕರೆತರುತ್ತದೆ. ಆದರೆ ಸದಾ ಸಂತುಷ್ಟವಾಗಿರಬೇಕು. ಪರಿಸ್ಥಿತಿಯೆವಾದರೂ ಬದಲಾಗಲಿ ಆದರೆ ಸಂತುಷ್ಟತೆಯ ಸ್ಥಿತಿಯನ್ನು ಪರಿಸ್ಥಿತಿಯು ಬದಲಾಯಿಸಲು ಸಾಧ್ಯವಾಗುವುದಿಲ್ಲ. ಪರ-ಸ್ಥಿತಿಯಿರುವುದೇ ಬದಲಾಯಿಸುವುದಕ್ಕೆ ಆದರೆ ಸ್ವ ಸಂತುಷ್ಟತೆಯ ಸ್ಥಿತಿಯು ಸದಾ ಪ್ರಗತಿಶೀಲವಾಗಿದೆ. ತಮ್ಮಮುಂದೆ ಎಂತಹ ಅಲುಗಾಡಿಸುವ ಪರಿಸ್ಥಿತಿಯೇ ಇರಲಿ, ಅದು ತೊಗಲುಗೊಂಬೆಯ ಆಟದಂತೆ ಅನುಭವವಾಗುತ್ತದೆ. ಎಲ್ಲವೂ ಇರುತ್ತವೆ ಆದರೆ ಅದು ತೊಗಲುಗೊಂಬೆ ಆಗಿರುತ್ತದೆ. ಅಂದಮೇಲೆ ಎಂತಹ ಪರಿಸ್ಥಿತಿಯಾದರೂ ತೊಗಲುಗೊಂಬೆಯ ಆಟವೆನಿಸುತ್ತದೆಯೇ ಅಥವಾ ವರ್ತಮಾನದ ಫ್ಯಾಷನ್ ಕಾರ್ಟೂನ್ ಶೋ ಇಷ್ಟವಾಗುತ್ತದೆಯೇ ಅಲ್ಲಿ ಸಿಂಹವೂ ಇದೆ, ಬೆಕ್ಕೂ ಇರುತ್ತದೆ ಆದರೆ ಅಲ್ಲಿ ಆಗುವುದೇನು? ಕಾರ್ಟೂನ್. ಕಥೆಯು ಪೂರ್ಣಗೊಳ್ಳುತ್ತದೆ ಆದರೆ ಅದು ಕಾರ್ಟೂನ್ ಕಥೆ, ಸತ್ಯವಲ್ಲ. ಕೆಲವೊಮ್ಮೆ ಯಾವುದೇ ಪರಿಸ್ಥಿತಿಯು ಬಂದಾಗ ಒಂದು ಬೇಹದ್ದಿನ ಸ್ಕ್ರೀನ್ ನಲ್ಲಿ ಕಾರ್ಟೂನ್ ಶೋ ನಡೆಯುತ್ತಿದೆ ಎಂದು ತಿಳಿದುಕೊಳ್ಳಿ. ಅಥವಾ ತೊಗಲುಗೊಂಬೆ ಆಟ ನಡೆಯುತ್ತಿದೆ. ಅದನ್ನು ನೋಡುತ್ತಾ ಬೇಸರವಾಗುವಿರಾ ಅಥವಾ ಮನೋರಂಜನೆ ಆಗುವುದೇ? ಆ ಶೋ. ನೋಡುವುದಂತೂ ಒಳ್ಳೆಯದಲ್ಲವೆ. ಹಾಗಾದರೆ ಈ ಮಾಯೆ ಅಥವಾ ಪ್ರಕೃತಿಯಿಂದ ಏನೆಲ್ಲವೂ ಆಗುತ್ತದೆಯೋ, ಇದೂ ಸಹ ಒಂದು ಆಟವಾಗಿದೆ. ಇದನ್ನು ಸಾಕ್ಷಿಸ್ಥಿತಿಯಲ್ಲಿದ್ದು ಸದಾ ಸಂತುಷ್ಟ ಸ್ವರೂಪದಲ್ಲಿದ್ದು ನೋಡಿರಿ ನಾನು ಸಂತುಷ್ಟಮಣಿ ಆಗಿದ್ದೇನೆ, ಸಂತೋಷಿ ಆತ್ಮನಾಗಿದ್ದೇನೆ ಎಂದು ತಮ್ಮ ಗೌರವದಲ್ಲಿರುತ್ತಾ ನೋಡಿರಿ. ಇದು ಸಂಗಮದ ಶ್ರೇಷ್ಠ ಗೌರವವಾಗಿದೆ. ಹಾಗಾದರೆ ಈ ಸ್ಥಿತಿಯಲ್ಲಿರುವುದು ಬರುತ್ತದೆಯಲ್ಲವೇ? ಅಥವಾ ಬೇಸರವಾಗುವುದು ಚೆನ್ನಾಗಿರುವುದೇ? ಸದಾ ಸಂತುಷ್ಟತೆಯ ವಿಶೇಷತೆಯನ್ನು ಸ್ಮೃತಿ ಸ್ವರೂಪದಲ್ಲಿ ಇಟ್ಟುಕೊಳ್ಳಿರಿ.

ಪ್ರಾಪ್ತಿಗಳಲ್ಲಿ ವಿಶೇಷ ಸಂಬಂಧ ಹಾಗೂ ಸಂಪತ್ತಿನ ಅವಶ್ಯಕತೆಯಿದೆ. ಸಂಬಂಧದಲ್ಲಿಯೂ ಒಂದುವೇಳೆ ಒಂದು ಸಂಬಂಧದಲ್ಲಿ ಅಪ್ರಾಪ್ತಿಯಿದ್ದರೆ ಸಂಪೂರ್ಣ ಸಂತುಷ್ಟತೆಯಿರುವುದಿಲ್ಲ. ಅಂದಾಗ ಸಂಬಂಧದಲ್ಲಿಯೂ ಸರ್ವ ಸಂಬಂಧವಿರಬೇಕು ಹಾಗೂ ಅವಿನಾಶಿ ಇರಬೇಕು. ಒಂದುವೇಳೆ ಯಾವುದೇ ಸಂಬಂಧವು ವಿನಾಶಿಯಾಗಿದ್ದರೆ ಸ್ವತಹವಾಗಿ ಅಪ್ರಾಪ್ತಿ ಮತ್ತು ಅಸಂತುಷ್ಟತೆಯು ಇರುತ್ತದೆ. ಆದರೆ ವರ್ತಮಾನ ಇದೊಂದೇ ಸಂಗಮಯುಗದಲ್ಲಿ ಸರ್ವ ಅವಿನಾಶಿ ಸಂಬಂಧವನ್ನು ಒಬ್ಬ ತಂದೆಯಿಂದ ಅನುಭವ ಮಾಡಲು ಸಾಧ್ಯ. ಸತ್ಯಯುಗದಲ್ಲಿಯೂ ಸಂಬಂಧಗಳು ಬಹಳ ಕಡಿಮೆಯಿದೆ, ಸರ್ವ ಸಂಬಂಧಗಳಿಲ್ಲ. ಆದರೆ ಈ ಸಮಯದಲ್ಲಿ ಯಾವ ಸಂಬಂಧದ ಆಕರ್ಷಣೆಯಿದೆಯೋ ಆ ಸಂಬಂಧವನ್ನು ಪರಮಾತ್ಮನಿಂದ ಅನುಭವ ಮಾಡಬಹುದು. ಆ ಸಂಬಂಧವನ್ನು ಪರಮಾತ್ಮನ ಮೂಲಕ ಅನುಭವ ಮಾಡಬಹುದು. ಪ್ರತಿಯೊಬ್ಬರ ಜೀವನದಲ್ಲಿಯೂ ಭಿನ್ನ-ಭಿನ್ನ ಸಂಬಂಧಗಳು ಪ್ರಿಯವಾಗಿರುತ್ತದೆ, ಕೆಲವರಿಗೆ ತಂದೆಯ ಸಂಬಂಧವೇನೂ ಅಷ್ಟೊಂದು ಇಷ್ಟವಾಗುವುದಿಲ್ಲ. ಮಿತ್ರನ ಸಂಬಂಧವು ಹೆಚ್ಚಾಗಿ ಪ್ರಿಯವೆನಿಸುತ್ತದೆ. ಆದರೆ ಒಂದು ಸಮಯದಲ್ಲಿ ಹಾಗೂ

ಒಬ್ಬರಿಂದ ಸರ್ವ ಸಂಬಂಧಗಳು ಪ್ರಾಪ್ತಿಯಾಗಿದೆಯೇ? ಸರ್ವ ಪ್ರಾಪ್ತಿಯಾಗಿದೆಯೇ ಅಥವಾ ಕೆಲವು ಉಳಿದಿದೆಯೇ? ಹಿಂದೆ ಕುಳಿತಿರುವವರೇನು ತಿಳಿಯುವಿರಿ? ಇಂದು ಹೊಸ- ಹೊಸದಾಗಿ ಬಂದಿರುವವರಿಗೆ ಮುಂದೆ ಕುಳಿತುಕೊಳ್ಳುವ ಅವಕಾಶ ಕೊಡಲಾಗಿದೆ. ಒಳ್ಳೆಯದು - ಯಾರು ಈ ಕಲ್ಪದಲ್ಲಿ ಈಗ ಮೊದಲ ಬಾರಿ ಬಂದಿದ್ದಾರೆಯೋ ಅವರು ಕೈ ಮೇಲೆ ಮಾಡಿರಿ. ಭಲೆ ಬಂದಿದ್ದೀರಿ, ಬಾಪ್‌ದಾದಾರವರು ಪದಮಪಟ್ಟು ಸ್ನೇಹಸಂಪನ್ನ ಸ್ವಾಗತ ಮಾಡುತ್ತಿದ್ದಾರೆ. ಹೊಸಬರಾಗಿದ್ದರೂ ಕಲ್ಪ-ಕಲ್ಪದ ಅಧಿಕಾರಿಯಾಗಿದ್ದಾರೆ ಇದನ್ನಂತು ತಿಳಿಯುತ್ತೀರಲ್ಲವೆ! ಬಾಪ್‌ದಾದಾರವರು ಸದಾ ಹೇಳುತ್ತಾರೆ- ದೊಡ್ಡವರಂತು ದೊಡ್ಡವರು ಆದರೆ ಚಿಕ್ಕವರು ತಂದೆಯ ಸಮಾನರಾಗಿದ್ದಾರೆ ಆದ್ದರಿಂದ ಸದಾ ತಮ್ಮ ಆತ್ಮಿಕ ಬೇಹದ್ದಿನ ಸಂಪೂರ್ಣ ಅಧಿಕಾರದ ನಿಶ್ಚಯ ಹಾಗೂ ನಶೆಯಲ್ಲಿರಿ. ಬೇಹದ್ದಿನ ನಶೆಯಾಗಿದೆ. ಅಲ್ಪಕಾಲದ್ದನ್ನು ಇಟ್ಟುಕೊಳ್ಳಬಾರದು. ತಾವೆಷ್ಟು ಶ್ರೇಷ್ಠ ಅಧಿಕಾರಿ ಆಗಿದ್ದೀರಿ, ಸ್ವಯಂ ತಂದೆ ಸರ್ವಶಕ್ತಿವಂತನ ಮೇಲೆ ಅಧಿಕಾರವನ್ನಿಟ್ಟಿದ್ದೀರಿ. ಪರಮಾತ್ಮನ ಅಧಿಕಾರಿ- ಇದಕ್ಕಿಂತ ದೊಡ್ಡ ಅಧಿಕಾರವೇನಾದರೂ ಇದೆಯೇ! ಯಾವಾಗ ಬೀಜವನ್ನೇ ತಮ್ಮದನ್ನಾಗಿ ಮಾಡಿಕೊಂಡಿದ್ದೀರಿ ಅಂದಮೇಲೆ ವೃಕ್ಷವಂತು ಅದರಲ್ಲಿ ಅಡಕವಾಗಿಯೇ ಇದೆ. ಸರ್ವ ಸಂಬಂಧಗಳ ಅವಿನಾಶಿ ಅಧಿಕಾರವನ್ನೂ ಪಡೆದುಬಿಟ್ಟಿದ್ದೀರಿ. ಹಾಗೆಯೇ ಒಂದುವೇಳೆ ಸಂಪತ್ತಿನಲ್ಲಿ ಕೇವಲ ಸ್ಥೂಲ ಸಂಪತ್ತಿದ್ದರೂ ಸದಾ ಸಂತುಷ್ಟವಾಗಿರಲು ಸಾಧ್ಯವಿಲ್ಲ. ಸ್ಥೂಲ ಸಂಪತ್ತಿನ ಜೊತೆಗೆ ಸರ್ವಗುಣಗಳ ಸಂಪತ್ತು, ಸರ್ವ ಶಕ್ತಿಗಳ ಸಂಪತ್ತು. ಶ್ರೇಷ್ಠ ಸಂಪನ್ನ ಜ್ಞಾನದ ಸಂಪತ್ತೇನಾದರೂ ಇಲ್ಲದಿದ್ದರೆ ಸದಾ ಸಂತುಷ್ಟವಾಗಿರಲು ಸಾಧ್ಯವಿಲ್ಲ. ಆದರೆ ತಮ್ಮೆಲ್ಲರ ಬಳಿ ಈ ಶ್ರೇಷ್ಠವಾದ ಸಂಪತ್ತುಗಳಿವೆ. ಸಂಪದ್ಭರಿತರು ಆಗಿದ್ದೀರಲ್ಲವೆ! ಪ್ರಪಂಚದವರಂತು ಕೇವಲ ಸ್ಥೂಲ ಸಂಪತ್ತಿರುವವರಿಗಷ್ಟೇ ಸಂಪದ್ಭರಿತ ಭವದ ವರದಾನವನ್ನು ಕೊಡುತ್ತಾರೆ ಆದರೆ ತಮ್ಮೆಲ್ಲರಿಗೂ ವರದಾತಾ ತಂದೆಯು ಸರ್ವಶ್ರೇಷ್ಠ ಸಂಪತ್ತಿಭವದ ವರದಾನವನ್ನು ಕೊಡುತ್ತಾರೆ. ಹಾಗಾದರೆ ಎಲ್ಲಾ ಸಂಪತ್ತುಗಳಿವೆಯೇ? ಅಥವಾ ಏನಾದರೂ ಕಡಿಮೆಯಿದೆಯೇ? ಸಂಪನ್ನವಾಗಿದೆಯೇ? ಹಿಂದಿರುವವರ ಮೇಲೆ ಎಲ್ಲರಿಗಿಂತಲೂ ಹೆಚ್ಚು ಗಮನವಿದೆ. ಮುಂದಿರುವವರಿಗೆ ತಂದೆಯ ಕಡೇ ಗಮನ ಹೆಚ್ಚಾಗಿದೆ ಮತ್ತು ತಂದೆಯವರ ಗಮನ ಹಿಂದಿರುವವರ ಮೇಲೆ ಹೆಚ್ಚಿನದಾಗಿದೆ. ಯಾರೆಷ್ಟು ದೂರವಿದ್ದಾರೆಯೋ ಅಷ್ಟೇ ನಯನಗಳಲ್ಲಿ ಸಮಾವೇಶವಾಗಿದ್ದಾರೆ.

ಸಾಕಾರ ವತನದಲ್ಲಂತು ಸಾಕಾರದ ಮಾತುಗಳಾಗುತ್ತವೆ. ಪರಮಧಾಮದಲ್ಲಿ ನೋಡಿ- ತಾವೆಲ್ಲಾ ಆತ್ಮರು ಎಷ್ಟೊಂದು ಸಮೀಪವಿರಬಹುದು! ಎಲ್ಲರೂ ಜೊತೆಯಿರುತ್ತೇವೆ ಅಲ್ಲವೆ! ಮತ್ತು ಸೂಕ್ಷ್ಮ ವತನದಲ್ಲಿಯೂ ಇಷ್ಟೂ ಬೇಹದ್ದಿನಲ್ಲಿರುತ್ತದೆ. ಅಲ್ಲಿ ಯಾರೆಷ್ಟು ಸಮೀಪ ಬರಲು ಬಯಸುವರೋ ಬರಬಹುದು. ಆದರೆ ಮಕ್ಕಳ ಸ್ನೇಹವು ನಿರಾಕಾರ ಹಾಗೂ ಆಕಾರನನ್ನೂ ಸಾಕಾರ ಮಾಡಲು ಬಯಸುತ್ತಾರೆ. ಹಾಗಾದರೆ ತಂದೆಯು ಏನು ಹೇಳುತ್ತಾರೆ? ಆಯಿತು ಪ್ರಭು, ಪ್ರಭು ಹಾಜರಿದ್ದೇವೆ. ಮಕ್ಕಳಂತು ತಂದೆಗೂ ಪ್ರಭುವಾಗಿದ್ದಾರೆ. ಮಾಲೀಕರಾಗಿದ್ದಾರಲ್ಲವೆ! ಮಾಲೀಕನನ್ನು ಪ್ರಭು ಎಂದು ಹೇಳಲಾಗುತ್ತದೆ ಮತ್ತು ಬಾಲಕನನ್ನೂ ಮಾಲೀಕನೆಂದು ಹೇಳಲಾಗುತ್ತದೆ ಹಾಗಾದರೆ ಎಲ್ಲರೂ ಯಾರಾಗಿದ್ದೀರಿ? **ಸಂತುಷ್ಟ ಮಣಿಗಳು, ಸಂಬಂಧದಲ್ಲಿಯೂ ಹಾಗೂ ಸಂಪತ್ತಿನಲ್ಲಿಯೂ ಸಂತುಷ್ಟ, ಸಂಬಂಧ, ಸಂಪತ್ತು ಹಾಗೂ ಮತ್ತೊಂದು ಆರೋಗ್ಯ. ತಾವೆಲ್ಲರೂ ಆರೋಗ್ಯವಾಗಿದ್ದೀರಲ್ಲವೆ ಅಥವಾ ರೋಗಿಯಾಗಿದ್ದೀರಾ? ಆತ್ಮವಂತು ಆರೋಗ್ಯವಾಗಿ**

ಇದೆಯಲ್ಲವೆ, ಶರೀರದ ಮಾತೇನೂ ಇಲ್ಲ. ಅತ್ಮವು ಸದಾ ಶಕ್ತಿಶಾಲಿಯಾಗಿದೆ. ಸಂಗಮದಲ್ಲಿ ಶ್ರೇಷ್ಠ ಆರೋಗ್ಯವು ಆತ್ಮನ ಆರೋಗ್ಯವಾಗಿದೆ. ಈ ಸಮಯದ ಆತ್ಮನ ಆರೋಗ್ಯವು ಜನ್ಮ-ಜನ್ಮಾಂತರ ಶರೀರದ ಆರೋಗ್ಯವನ್ನೂ ಕೊಡಿಸುತ್ತದೆ ಆದರೆ ಈ ಸಮಯದಲ್ಲಿ ಪ್ರಕೃತಿಯು ತನ್ನ ರೂಪವನ್ನು ಸ್ವಲ್ಪ ತೋರಿಸುತ್ತದೆ. ಇದರಲ್ಲೇನೂ ದೊಡ್ಡ ಮಾತಿಲ್ಲ. ಇದೂ ಸಹ ಕಾರ್ಟೂನ್ ಶೋ ಆಗಿದೆ. ಅದಕ್ಕಾಗಿ ಸರ್ವಶಕ್ತಿಗಳು ಇವೆಯಲ್ಲವೆ. ಸಂಬಂಧವೂ ಇದೆ. ಸಂಪತ್ತಿಭವ ವರದಾನವೂ ಇದೆ. ಸರ್ವ ಸಂಬಂಧ ಭವದ ವರದಾನವೂ ಇದೆ ಮತ್ತು ಸದಾ ಆರೋಗ್ಯವಾನ್ ಭವದ ವರದನವೂ ಇದೆ. ಮೂರೂ ವರದಾನಗಳು ವರದಾತಾ ತಂದೆಯಿಂದ ಸಿಕ್ಕಿರುವುದಾಗಿದೆ ಅಂದಮೇಲೆ ಸಮಯಯಾನುಸಾರ ಆ ವರದಾನಗಳನ್ನು ಕಾರ್ಯದಲ್ಲಿ ಉಪಯೋಗಿಸಿರಿ. ಕೇವಲ ವರದಾನಗಳನ್ನು ಕೇಳಿಸಿಕೊಂಡು ಹೌದು. ನನಗೆ ಬಹಳ ಒಳ್ಳೆಯ ವರದಾನ ಸಿಕ್ಕಿದೆ ಎಂದು ಖುಷಿಯಾಗಿಬಿಡಬಾರದು. ಕೇವಲ ನೋಟ್ ಮಾಡಿಡುವುದಲ್ಲ ಆದರೆ  ಸಮಯಕ್ಕೆ ಅವಶ್ಯವಿರುವ ವರದಾನವನ್ನು ಕಾರ್ಯದಲ್ಲಿ ಉಪಯೋಗ ಮಾಡುವುದರಿಂದ ಆ ವರದಾನವು ಸದಾಕಾಲ ಇರುತ್ತದೆ. ಒಂದುವೇಳೆ ಸಮಯಯಾನುಸಾರ ಕಾರ್ಯದಲ್ಲಿ ಉಪಯೋಗಿಸದಿದ್ದರೆ ವರದಾನವು ಫಲ ಕೊಡುವುದಿಲ್ಲ. ವರದಾನವಂತು ಅವಿನಾಶಿ ತಂದೆಯದಾಗಿದೆ ಆದರೆ ವರದಾನವನ್ನು ತಾವು ಫಲಸ್ವರೂಪ ಮಾಡಬೇಕಾಗಿದೆ. ಬೀಜವಂತು ಇದೆ ಆದರೆ ಅದರಿಂದ ಎಷ್ಟು ಫಲವು ಬರುತ್ತದೆ ಎಂಬುದು ತಮ್ಮ ಕೈಯಲ್ಲಿದೆ. ಕೆಲವರು ಕೇವಲ ವರದಾನದ ಬೀಜವನ್ನು ನೋಡಿ ಖುಷಿಯಾಗುತ್ತಾ ಇರುತ್ತಾರೆ- ಬಹಳ ಚೆನ್ನಾಗಿದೆ, ಬಹಳ ಚೆನ್ನಾಗಿದೆ ಎಂದು. ಆದರೆ ಫಲದಾಯಕ ಮಾಡಿರಿ, ಮತ್ತೆ-ಮತ್ತೆ ಸ್ಮೃತಿಯ ನೀರನ್ನು ಕೊಡಿ. ವರದಾನದ ಸ್ವರೂಪದಲ್ಲಿ ಸ್ಥಿತರಾಗುವ ಬಿಸಿಲನ್ನು ಕೊಡಿ ನಂತರ ನೋಡಿ- ವರದಾನವು ಸದಾ ಫಲಸ್ವರೂಪವಾಗುತ್ತಾ ಇರುತ್ತದೆ. ಅನ್ಯ ವರದಾನಗಳನ್ನೂ ಜೊತೆಯಲ್ಲಿ ಕರೆತರುತ್ತದೆ. ವರದಾನಗಳ ಫಲ ಸ್ವರೂಪವಾಗಿಬಿಡುತ್ತದೆ. ಹಾಗಾದರೆ ಇಂದಿನ ತ್ರಿ-ವರದಾನವನ್ನು ಫಲಸ್ವರೂಪ ಮಾಡಿರಿ. ಹಾಗೂ ಆ ಸಮಯಕ್ಕೆ ಅವಶ್ಯವಾಗಿ ನೆನಪು ಮಾಡಿಕೊಳ್ಳಿರಿ. ಸಮಯಯಾನುಸಾರ ಮರೆತುಹೋಗಿ ನಂತರ ಓದುತ್ತಾ ಇರುತ್ತೀರಿ. ವರದಾನಗಳನ್ನು ಎಷ್ಟು ಸಮಯಯಾನುಸಾರ ಕಾರ್ಯದಲ್ಲಿ ಉಪಯೋಗಿಸುತ್ತೀರೋ ಅಷ್ಟು ಆ ವರದಾನ ಮತ್ತಷ್ಟು ಶ್ರೇಷ್ಠ ಸ್ವರೂಪವನ್ನು ತೋರಿಸುತ್ತಿರುತ್ತದೆ. ಹಾಗಾದರೆ ಎಲ್ಲರಿಗೂ ವರದಾನ ಸಿಕ್ಕಿದೆಯಲ್ಲವೆ! ಒಳ್ಳೆಯದು-

ನಾಲ್ಕೂ ಕಡೆಯ ದೇಶ-ವಿದೇಶದ ಸರ್ವ ಸಂತೋಷಿ ಆತ್ಮರಿಗೆ, ಸಂತುಷ್ಟಮಣಿಗಳಿಗೆ, ಸರ್ವ ಪ್ರಾಪ್ತಿ ಸಂಪನ್ನ ಆತ್ಮರಿಗೆ, ಯಾರೆಲ್ಲರೂ ಈ ದಿನದಕ್ಕಾಗಿ ನೆನಪು, ಪತ್ರ, ಕಾರ್ಡುಗಳನ್ನು ಕಳುಹಿಸಲಾಗಿದೆ, ಈ ವಿಶೇಷ ದಿನದ ಪ್ರಯುಕ್ತವಾಗಿಯೂ ಸರ್ವ ಮಕ್ಕಳಿಗೆ ನೆನಪು-ಪ್ರೀತಿಯನ್ನು ಪದಮಪಟ್ಟು ಸ್ವೀಕಾರ ಮಾಡಿರಿ. ಭಲೆ ದೂರ ಕುಳಿತಿದ್ದರೂ ಮನಸ್ಸಿನಲ್ಲಿ, ಹೃದಯದಲ್ಲಿ ಆಚರಿಸುತ್ತಿರಬಹುದು ಅಥವಾ ಸನ್ಮುಖದಲ್ಲಿ ಆಚರಿಸುತ್ತಿದ್ದರೂ ಕಾರ್ಡು ಅಥವಾ ಪತ್ರಗಳೆಲ್ಲವೂ ವತನದಲ್ಲಿ ಮೊದಲೇ ತಲುಪುತ್ತದೆ. ಅಂದಮೇಲೆ ಎಲ್ಲರ ಪತ್ರ, ಕಾರ್ಡು ಹಾಗೂ ಶುಭಸಂಕಲ್ಪಗಳ ನೆನಪು, ಶುಭಭಾವನೆಗಳ ನೆನಪಿನ ರಿಟರ್ನ್‌ನಲ್ಲಿ ಬಾಪ್‌ದಾದಾರವರ ವಿಶೇಷ ನೆನಪು-ಪ್ರೀತಿ ಹಾಗೂ ಬಾಲಕನಿಂದ ಮಾಲೀಕರಾದ ಎಲ್ಲಾ ಮಕ್ಕಳಿಗೂ ನಮಸ್ತೆ. ಒಳ್ಳೆಯದು-

**ದಾದಿಯವರೊಂದಿಗೆ ವಾರ್ತಾಲಾಪ:**

ಸೂಕ್ಷ್ಮ, ಸೂಚನೆಗಳ ಭಾಷೆಯನ್ನಂತು ತಿಳಿದಿದ್ದೀರಲ್ಲವೆ. ಹೇಗೆ ಅವ್ಯಕ್ತ ತಂದೆಯವರ ಸೂಚನೆಗಳ ಭಾಷೆಯನ್ನಂತು ತಿಳಿದಿದ್ದೀರಿ. ಅವ್ಯಕ್ತ ವತನದಲ್ಲಂತು ನಯನಗಳ ಭಾಷೆ ಹಾಗೂ ಸನ್ನೆಯ ಭಾಷೆಯಿದೆ. ಅದನ್ನು ತಾವೂ ಸಹ ತಿಳಿದಿದ್ದೀರಲ್ಲವೆ. ನಯನಗಳ ಭಾಷೆಯನ್ನು ತಿಳಿದಿದ್ದೀರಾ? ಸಾಕಾರದಿಂದ ಕಲಿತಿದ್ದೀರಲ್ಲವೆ. ಮುಖದ ಭಾಷೆಯಂತು ಕೇಳಿದ್ದೀರಿ. ಈಗ ನಯನಗಳ ಭಾಷೆಯಿದೆ. ಈ ಭಾಷೆಯು ಬಹಳ ಪ್ರಿಯವಾದ ಭಾಷೆಯಾಗಿದೆ. ಶಬ್ದದಿಂದ ದೂರವಂತು ಹೋಗಲೇಬೇಕು. ಆದರೂ ತಂದೆಯು ಆಯಿತು ಪ್ರಭು ಎನ್ನುತ್ತಾರೆ. ಒಳ್ಳೆಯದು-

**ಅವ್ಯಕ್ತ ಬಾಪ್‌ದಾದಾರವರ ವ್ಯಕ್ತಿಗತ ವಾರ್ತಾಲಾಪ:**

1.ಸ್ವಯಂ ಹಾಗೂ ಸಮಯದ ಮೇಲೆ ಭರವಸೆಯಿಲ್ಲ ಆದ್ದರಿಂದ ಧೃಡ ಸಂಕಲ್ಪದಿಂದ ಬಲಹೀನತೆಗಳನ್ನು ತೆಗೆದುಬಿಡಿ.

ಎಲ್ಲರೂ ತಮ್ಮನ್ನು ವಿಶ್ವ ಸೇವಾಧಾರಿ ಎಂದು ಅನುಭವ ಮಾಡುತ್ತೀರಾ?ಯಾರ ಬಳಿ ಸರ್ವ ಶಕ್ತಿಗಳ ಖಜಾನೆಗಳು ಸಂಪನ್ನವಾಗಿದೆಯೋ ಅವರೇ ವಿಶ್ವ ಸೇವಾಧಾರಿ ಅಥವಾ ವಿಶ್ವ ಕಲ್ಯಾಣಕಾರಿಯಾಗಲು ಸಾಧ್ಯ ಹಾಗಾದರೆ ಸರ್ವಶಕ್ತಿಗಳ ಸಂಗ್ರಹಣೆ ಸಂಗ್ರಹವಾಗಿದೆಯೇ? ಸರ್ವಶಕ್ತಿಗಳಿವೆಯೇ ಅಥವಾ ಕೆಲವು ಶಕ್ತಿಗಳಿದ್ದು, ಕೆಲವು ಇಲ್ಲವೆನ್ನುವಿರಾ? ಕೆಲವೊಮ್ಮೆ ಕೆಲವು ಕಡಿಮೆಯಾಗಿಬಿಡುತ್ತದೆಯೇ! ಸದಾ ತಮ್ಮನ್ನು ತಾವು ಪರಿಶೀಲಿಸಿರಿ- ಸರ್ವಶಕ್ತಿಗಳವೆಯೇ ಅಥವಾ ಯಾವುದಾದರೂ ಶಕ್ತಿಯ ಕೊರತೆಯಿದೆಯೇ? ಒಂದುವೇಳೆ ಕೊರತೆಯಿದ್ದರೆ ಅದಕ್ಕೆ ಕಾರಣವನ್ನೂ ಯೋಚಿಸಿರಿ ಏಕೆಂದರೆ ಕಾರಣವನ್ನು ಅರಿತಾಗಲೇ ನಿವಾರಿಸಬಹುದು. ಏಕೆಂದರೆ ಇದು ಮಾಯೆಯ ನಿಯಮವಾಗಿದೆ- ತಮ್ಮಲ್ಲಿ ಯಾವ ಬಲಹೀನತೆಯಿದೆಯೋ ಅದೇ ಬಲಹೀನತೆಯ ಮೂಲಕವೇ ತಮ್ಮನ್ನು ಮಾಯಾಜೀತರನ್ನಾಗಿ ಆಗಲು ಬಿಡುವುದಿಲ್ಲ. ಹಾಗಾದರೆ ವರ್ತಮಾನ ಸಮಯದಲ್ಲಿಯೂ ಸಮಯ-ಸಮಯದಲ್ಲಿ ಮಾಯೆಯೂ ಸಹ ಅದೇ ಬಲಹೀನತೆಯ ಲಾಭವನ್ನು ತೆಗೆದುಕೊಳ್ಳುತ್ತದೆ ಮತ್ತು ಮುಂದೆ ನಡೆದಂತೆ ಯಾವಾಗ ಅಂತಿಮ ಸಮಯ ಬರುತ್ತದೆಯೋ ಆಗ ಅದೇ ಬಲಹೀನತೆಯು ಮೋಸ ಮಾಡಿಬಿಡುತ್ತದೆ. ಅದರ ಬಗ್ಗೆ ಹೀಗೆ ಯೋಚಿಸಬಾರದು- ಚಿಕ್ಕ ಬಲಹೀನತೆಯಿದೆ. ಒಂದು ಬಲಹೀನತೆಯಿದೆ ಅಷ್ಟೇ ಬಾಕಿ ಬಹಳಷ್ಟು ಒಳ್ಳೆಯವನಿದ್ದೇನೆ! ಒಂದು ಬಲಹೀನತೆಯೂ ಸಹ ಮೋಸ ಮಾಡಿಬಿಡುತ್ತದೆ ಆದ್ದರಿಂದ ತಮ್ಮೊಳಗೆ ಯಾವುದೇ ಬಲಹೀನತೆಯನ್ನೂ ಇರುವುದಕ್ಕೆ ಬಿಡಬಾರದು. ಒಂದುವೇಳೆ ಸ್ವಯಂ ತಾವು ಸಮಾಪ್ತಿ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಮತ್ತಾರದಾದರೂ ಸಹಯೋಗ ಪಡೆಯಿರಿ.

ರಿವೈಸ್ ಕೋರ್ಸ್ 03-04-1994

***ಸಂತುಷ್ಟತೆಯ ಆಧಾರ ಸಂಬಂಧ, ಸಂಪತ್ತು ಹಾಗೂ ಆರೋಗ್ಯ***

ಸಂತೋಷಿ ಆತ್ಮರು ಸ್ವಯಂಗೂ ಪ್ರಿಯ, ಸರ್ವರಿಗೂ ಪ್ರಿಯ, ಹಾಗೂ ತಂದೆಗೂ ಪ್ರಿಯರಾಗಿದ್ದಾರೆ. ಎಲ್ಲಿ ಸರ್ವಪ್ರಾಪ್ತಿಗಳಿವೆಯೋ ಅಲ್ಲಿ ಸಂತುಷ್ಟತೆ ಸ್ವಾಭಾವಿಕವಾಗಿ ಇರುತ್ತದೆ ಎಂದು ತಿಳಿಸುತ್ತಾ ಹೃದಯರಾಮನಾದ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸರ್ವಪ್ರಾಪ್ತಿ ಸಂಪನ್ನ ಸ್ವರೂಪ.

2. ನನ್ನ ಸಂತುಷ್ಟತೆಯ ಪ್ರಕಂಪನ(ತರಂಗಗಳು) ಅಸಂತುಷ್ಟ ಆತ್ಮರನ್ನು, ಅಸಂತುಷ್ಟ ವಾಯುಮಂಡಲವನ್ನು ಸಂತೋಷದ ವಾಯುಮಂಡಲದಲ್ಲಿ ಬದಲಾಯಿಸಿದೆ.

3. ನಾನು ಬಾಪ್‌ದಾದಾರವರಿಂದ ಸಂತುಷ್ಟತೆಯ ವಿಶೇಷ ವರದಾನವನ್ನು ಪಡೆದು ಸದಾ ಸಂತುಷ್ಟವಾಗಿ ಇದ್ದೇನೆ.

4. ನನ್ನ ಸಂತುಷ್ಟತೆಯ ಸ್ಥಿತಿ ಸದಾ ಪ್ರಗತಿಶೀಲವಾಗಿದೆ.

5. ನನ್ನ ಮುಂದೆ ಎಂತಹ ಅಲುಗಾಡಿಸುವ ಪರಿಸ್ಥಿತಿಯೇ ಬಂದರೂ ನಾನು ಸಂತುಷ್ಟ ಮಣಿಯಾಗಿದ್ದೇನೆ, ಸಂತೋಷ ಆತ್ಮನಾಗಿದ್ದೇನೆ ಎಂಬ ಗೌರವದಲ್ಲಿದ್ದು ಪರಿಸ್ಥಿತಿಯನ್ನು ಕಾರ್ಟೂನ್ ಶೋ ಅಥವಾ ತೊಗಲುಗೊಂಬೆಯ ಆಟದಂತೆ ಅನುಭವ ಮಾಡುವ ಸಾಕ್ಷಿ ಸ್ವರೂಪ.

6. ನಾನು ಸರ್ವ ಅವಿನಾಶಿ ಸಂಬಂಧಗಳನ್ನು ಒಬ್ಬ ತಂದೆಯಿಂದ ಅನುಭವ ಮಾಡಿಕೊಳ್ಳುತ್ತಿದ್ದೇನೆ.

7. ನಾನು ಸದಾ ನನ್ನ ಆತ್ಮಿಕ ಬೇಹದ್ದಿನ ಸಂಪೂರ್ಣ ಅಧಿಕಾರದ ನಿಶ್ಚಯ ಹಾಗೂ ನಶೆಯಲ್ಲಿದ್ದೇನೆ.

8. ನಾನು ಸ್ಥೂಲ ಸಂಪತ್ತಿನ ಜೊತೆಗೆ ಸರ್ವ ಗುಣಗಳ ಸಂಪತ್ತು, ಸರ್ವಶಕ್ತಿಗಳ ಸಂಪತ್ತು, ಶ್ರೇಷ್ಠ ಸಂಪನ್ನ ಜ್ಞಾನದ ಸಂಪತ್ತನ್ನು ಪಡೆದಿರುವ ಸರ್ವಶ್ರೇಷ್ಠ ಸಂಪತ್ತಿ ಭವ ಎಂಬ ವರದಾನದ ವರದಾನಿ.

9. ನಾನು ಸಂಗಮ ಸಮಯದ ಆತ್ಮನ ಆರೋಗ್ಯದಿಂದ ಜನ್ಮಜನ್ಮಾಂತರ ಶರೀರದ ಆರೋಗ್ಯವನ್ನು ಪಡೆದಿದ್ದೇನೆ.

10. ನಾನು ಪರಮಾತ್ಮನಿಂದ ಸಂಪತ್ತಿ ಭವ!, ಸಂಬಂಧ ಭವ!, ಸದಾ ಆರೋಗ್ಯವಾನ್ ಭವ!ದ ವರದಾನವನ್ನು ಪಡೆದಿದ್ದೇನೆ.

11. ನಾನು ಸಮಯಾನುಸಾರ ವರದಾನಗಳನ್ನು ಕಾರ್ಯದಲ್ಲಿ ಉಪಯೋಗಿಸಿ ವರದಾನವನ್ನು ಫಲ ಸ್ವರೂಪವನ್ನಾಗಿ ಮಾಡಿದ್ದೇನೆ.